Munsiff-Magistrate's Court for Arsikere.

Q.—399. **Sri K. PANCHAKSHARIAH** (Arsikere).—

Will the Government be pleased to state :—

(*a*) whether it is under their contemplation to establish a Munsiff-Magistrate's Court in each taluk in the State ;

(*b*) whether they have decided to open one such court in Arsikere ?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) No.

ಶ್ರೀ ಕೆ. ಪಂಚಾಕ್ಷರಯ್ಯನವರು.—ಅರಸೀಕೆರೆ ತಾಲ್ಲೂಕಿನವರು ಕೋರ್ಟಿಗೆ ಹೋಗಬೇಕಾದರೆ ಸುಮಾರು 70 ಮೈಲಿ ದೂರ ಹಾಸನಕ್ಕೇ ಹೋಗ ಬೇಕೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯನವರು.—ಇದರಿಂದ ಬಡವರಿಗೆ, ರೈತರಿಗೆ ನ್ಯಾಯದೊರಕಿಸಿ ಕೊಳ್ಳುವುದಕ್ಕೆ ಅವಕಾಶವಾಗದೇಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಷ್ಟು ದೂರ ಹೋಗಬೇಕಾಗಿರುವುದು ಅಲ್ಲೊಂದೇ ಕಡೆಯಲ್ಲಿ ಮಾತ್ರವಲ್ಲ ; ಬೇರೆ ಕಡೆಗಳಲ್ಲಿಯೂ ಹೀಗಿದೆ.

ಶ್ರೀ ಕೆ. ಪಂಚಾಕ್ಷರಯ್ಯನವರು.—ಅಲ್ಲಿ ಹತ್ತಿರ ಕೋರ್ಟಿರುವ ಹಾಗೆ ಏರ್ಪಾಡುಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆಲೋಚನೆ ಮಾಡುತ್ತೇವೆ.

Policy *re* : grant of primary and middle schools to rural parts.

Q.—489. **Sri U. M. MADAPPA** (Chamarajanagar).—

Will the Government be pleased to state :—

the definite policy they have adopted in the matter of giving primary and middle schools to the rural parts ?

A.—**Sri A. G. RAMACHANDRA RAO** (Minister for Law and Education).—

I. Primary Schools.

Generally primary schools are sanctioned to single villages or groups of neighouring villages with a population of 500 and above in maidan and 200 and above in malnad, preference, however, being given to villages where buildings for the schools and quarters for the teachers are readily available.

II. Middle Schools.

The provision in the departmental budget is being utilised for giving the third or the third and fourth teachers to the best deserving new type middle schools as the first step in their gradual conversion into *pucca* middle schools. Thus, almost the entire provision allotted for the purpose is being utilised for the development of the new type middle schools in rural areas since very few new type middle schools are sanctioned for urban areas.

New Type Middle Schools.

As far as funds permit, primary schools, *i.e.*, those with a strength of 100 and above containing all the four primary classes and a staff of not less than four, are being developed into new type middle schools according to order of priority.

ಶ್ರೀ ಯು. ಎಂ. ಮಾದಪ್ಪನವರು.—ಪ್ರೈಮರಿ ಸ್ಕೂಲು ಕಟ್ಟಡಗಳು ಮತ್ತು ಉಪಾಧ್ಯಾಯರ ವಾಸದ ಮನೆಗಳನ್ನು ಯಾರು ಸಿದ್ಧಮಾಡಬೇಕು ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಸಾಮಾನ್ಯವಾಗಿ ಸರ್ಕಾರದವರು ಏರ್ಪಾಡು ಮಾಡಬೇಕು ; ಉಪಾಧ್ಯಾಯರ ವಾಸದ ಮನೆ ಸೌಲಭ್ಯವನ್ನು ಆಯಾ ಊರಿನವರೇ ಕಲ್ಪಿಸಿ ಕೊಟ್ಟಿರೆ ಅನುಕೂಲವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪನವರು.—ಸುಮಾರು ನೂರಕ್ಕೆ ಐವತ್ತು ಗ್ರಾಮಗಳಲ್ಲಿ 500 ಪ್ರಜಾ ಸಂಖ್ಯೆಯಿದ್ದರೂ, ಸಾಕಾದಷ್ಟು ಹುಡುಗರ ಸಂಖ್ಯೆಯಿದ್ದರೂ ಸರ್ಕಾರದವರು ಪ್ರೈಮರಿ ಸ್ಕೂಲುಗಳನ್ನು ಕೊಡದೇ ಇರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಂದಿದೆ.

ಶ್ರೀ ಯು. ಎಂ. ಮಾದಪ್ಪನವರು.—ತಕ್ಷಣ ಇದನ್ನು ಸರಿಪಡಿಸಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ತೆಗೆದುಕೊಳ್ಳುತ್ತಿದ್ದೇವೆ. ಆದರೆ ಹಣದ ಅಭಾವದಿಂದ ಎಲ್ಲಕಡೆಯೂ ಏರ್ಪಾಡುಮಾಡಲು ಅನಾನುಕೂಲವಾಗಿದೆ.

ಶ್ರೀ ಯು. ಎಂ. ಮಾದಪ್ಪನವರು.—ಪರಿಸ್ಥಿತಿ ಹೀಗಿರುವುದರಿಂದ ಮುಂದೆ ನಮ್ಮ ಮಕ್ಕಳು ಅಕ್ಷರಸ್ಥರಾಗುವುದಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಾರ್ವಜನಿಕರಿಂದ ಹಣ ಸಹಾಯ ಬಂದರೆ ಜಾಗ್ರತೆ ಇದು ಪರಿಹಾರವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪನವರು.—ವಯಸ್ಸಾದ ಮೇಲೆ ಅಕ್ಷರವನ್ನು ಕಲಿಯಬೇಕಾದರೆ ಕಷ್ಟವಾಗುತ್ತದೆ. ಆದುದರಿಂದ ಹುಡುಗರಾಗಿದ್ದಾಗಲೇ ಕಲಿಯಬೇಕಾದರೆ ಆದಷ್ಟು ಜಾಗ್ರತೆ ಸ್ಕೂಲುಗಳನ್ನೇರ್ಪಾಡು ಮಾಡುವುದು ಅವಶ್ಯಕವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು.

ಶ್ರೀ ಯು. ಎಂ. ಮಾದಪ್ಪನವರು.—ಹಾಗಾದರೆ ಇನ್ನು ಎಷ್ಟು ದಿವಸದಲ್ಲಿ ಅನುಕೂಲ ಕಲ್ಪಿಸುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಾರ್ವಜನಿಕರು ಎಷ್ಟು ಜಾಗ್ರತೆ ಹಣ ಒದಗಿಸಿದರೆ ಅಷ್ಟು ಜಾಗ್ರತೆಯಾಗಿ.

ಶ್ರೀ ಯು. ಎಂ. ಮಾದಪ್ಪನವರು.—ಸಾರ್ವಜನಿಕರು ಹಣ ಒದಗಿಸಬೇಕೆಂದು ಹೇಳಿದಹಾಗಾಯಿತಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ವಿದಿತವಾಗಿಯೇ ಇದೆ.

ಶ್ರೀ ಯು. ಎಂ. ಮಾದಪ್ಪನವರು.—ಸರ್ಕಾರದವರೇ ಕೊಡಬೇಕೆಂದು ಅಲ್ಲವೆ ತಾವು ಹೇಳಿದ್ದು ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಾಮಾನ್ಯವಾಗಿ ಆ ರೀತಿಯಿದೆ ಎಂದು ಹೇಳಿದೆ.

ಶ್ರೀ ಯು. ಎಂ. ಮಾದಪ್ಪನವರು.—ಪ್ರೈಮರಿ ಸ್ಕೂಲುಗಳನ್ನು ಸರ್ಕಾರ ಕೊಡದಿದ್ದರೆ, ಅಲ್ಲಿನ ಜನರು ಕೊಡತಕ್ಕ ಎಜ್ಯುಕೇಷ್ಷ ಸೆಸ್ ವಜಾಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ವಜಾಮಾಡಿದರೆ ಸ್ಕೂಲುಗಳ ಸಂಖ್ಯೆ ಇನ್ನೂ ಕಡಮೆಯಾಗುತ್ತದೆ.

ಶ್ರೀ ಯು. ಎಂ. ಮಾದಪ್ಪನವರು.—ಹಾಗಾದರೆ ಅವರು ಆ ಸೆಸ್ ಏಕೆ ಕೊಡಬೇಕು ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದರಿಂದ ಸ್ಕೂಲುಗಳನ್ನು ಹೆಚ್ಚಿಸುವುದಕ್ಕೆ ಅವಕಾಶವಾಗಿದೆ.

ಶ್ರೀ ಯು. ಎಂ. ಮಾದಪ್ಪನವರು.—ಮಿಡ್ಲ್ ಸ್ಕೂಲುಗಳು, ಹೊಸಮಾದರಿ ಮಿಡ್ಲ್ ಸ್ಕೂಲುಗಳು ಎಂದು ಉತ್ತರದಲ್ಲಿದೆ. ಈ ಎರಡಕ್ಕೂ ಏನು ವ್ಯತ್ಯಾಸ ?

Mr. SPEAKER.—That does not arise. The Hon'ble Member is expected to know these matters.

ಶ್ರೀ ಯು. ಎಂ. ಮಾದಪ್ಪನವರು.—ಪೂರ್ಣವಾದ ಮಿಡ್ಲ್ ಸ್ಕೂಲುಗಳನ್ನು ಯಾವ ಕಾರಣದಿಂದ ಕೊಡುತ್ತಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅನೇಕ ಕಡೆಗಳಿಗೆ ಕೊಟ್ಟಿದೆ.

ಶ್ರೀ ಯು. ಎಂ. ಮಾದಪ್ಪನವರು.—ನಾರ್ಕಾರು ಹತ್ತಿರದ ಹಳ್ಳಿಗಳಲ್ಲಿ ಪ್ರೈಮರಿ ಸ್ಕೂಲುಗಳಿದ್ದು ಸಾಕಷ್ಟು ಹುಡುಗರ ಸಂಖ್ಯೆಯು ಇದ್ದರೆ ಅಲ್ಲಿ ಯಾವುದಾದರೂ ಒಂದುಕಡೆ ಮಿಡ್ಲ್ ಸ್ಕೂಲು ಕೊಡುವ ನೀತಿಯನ್ನನುಸರಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹಣದ ಕೊರತೆ ಇರುವುದರಿಂದ ಪೂರ್ತಿಯಾಗಿ ಕೊಡಲು ಅನಾನುಕೂಲವಾಗಿದೆ.

ಶ್ರೀ ಯು. ಎಂ. ಮಾದಪ್ಪನವರು.—ಹೀಗೆ ಮಾಡಿದರೆ ಇದು ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ, ಪ್ರಜೆಗಳನ್ನು ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—Constitutional obligation ಇರುವುದು ಪ್ರೈಮರಿ ಸ್ಕೂಲುಗಳಿಗೆ ಮಾತ್ರ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಚಿತ್ರದುರ್ಗ ತಾಲ್ಲೂಕು ಕಾಸಗೋಡಿಗೆ ಸ್ಕೂಲು ಕೊಡಬೇಕೆಂದು ಮೂರು ವರ್ಷಗಳಿಂದ ಮನವಿ ಮಾಡಿಕೊಳ್ಳುತ್ತಿದ್ದಾರೆಯೆ ?

Sri A. G. RAMACHANDRA RAO.—I want notice for that.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಅದಕ್ಕೆ priority ಕೊಡುತ್ತೀರಾ ? ಈ ಸಾರಿ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಡಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ–ಹೆಗ್ಗಡದೇವನಕೋಟೆ).—ಗ್ರಾಮಾಂತರಗಳಲ್ಲಿ ಪ್ರೈಮರಿ ಸ್ಕೂಲುಗಳನ್ನು ಯಾರು ರಿಪೇರಿಮಾಡುವರು ?

ಶ್ರೀ ಎ. ಜಿ. ರಾಮಚಂದ್ರರಾಯರು.—ಕಟ್ಟಡಗಳನ್ನು ಸರ್ಕಾರಕ್ಕೆ ವಹಿಸಿದ್ದರೆ, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡುತ್ತಾರೆ. ಇಲ್ಲದಿದ್ದರೆ ಗ್ರಾಮಸ್ಥರೇ ಮಾಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು)—ಗ್ರಾಮಸ್ಥರು ಹಣ ಕಟ್ಟಿ 9–10 ವರ್ಷಗಳಾಗಿದ್ದರೂ ಸ್ಕೂಲು ಕಟ್ಟಡ ಕಟ್ಟಿಸದೇಯಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಕಡೂರು ತಾಲ್ಲೂಕಿನ ಒಂದು ಗ್ರಾಮದಲ್ಲಿ 9 ವರ್ಷವಾಗಿದೆ ಹಣ ಕೊಟ್ಟು.

ಶ್ರೀ ಎ. ಜಿ. ರಾಮಚಂದ್ರರಾಯರು.—ಯಾವುದೆಂದು ಹೇಳಿದರೆ, ವಿಚಾರಣೆ ಮಾಡುತ್ತೇವೆ.

ಶ್ರೀ ಎ. ಆರ್. ನಾಯ್ಡುರವರು (ಮಲ್ಲೇಶ್ವರ).—ಬೆಂಗಳೂರು ನಗರದ ರಾಜಾಮಹಲ್ ಗುಟ್ಟಹಳ್ಳಿಗೆ ಒಂದು ಮಿಡ್ಲ್ ಸ್ಕೂಲು ಬೇಕೆಂದು ಮನವಿ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಂದಿದೆ.

ಶ್ರೀ ಎ. ಆರ್. ನಾಯ್ಡುರವರು.—ಅದರ ಮೇಲೆ ಏನು ಕಾರ್ಯಕ್ರಮ ಕೈಕೊಂಡಿದ್ದಾರೆ ಸರ್ಕಾರ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸರ್ಕಾರದ ಹಣದ ಪರಿಸ್ಥಿತಿಯನ್ನು ನೋಡಿ ಸಾರ್ವಜನಿಕರು ಇದಕ್ಕೆ ಮುಂದೆ ಬರಬೇಕೆಂದು ಹೇಳಿದ್ದೇವೆ.

ಶ್ರೀ ಜಿ. ನಾರಾಯಣಗೌಡರು (ಮುಳುಬಾಗಿಲು–ಶ್ರೀನಿವಾಸಪುರ).—ಪ್ರಾಥಮಿಕ ಶಾಲೆಗಳನ್ನು ಹಳ್ಳಿಗಳಲ್ಲಿ ಕೊಡಬೇಕಾದರೆ ಅವರು ಹಣ ಕೊಟ್ಟರೆ ಅಂಥಾ ಕಡೆ ಮೊದಲು ಕೊಡುತ್ತೇವೆಂದು ಹೇಳಿದ್ದೀರಿ. ಪಟ್ಟಣಗಳಲ್ಲಿ ಕೊಡುವಾಗ ತಮ್ಮ ನೀತಿ ಏನು ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪಟ್ಟಣಗಳಲ್ಲಿ ಉಪಾಧ್ಯಾಯರಿಗೆ ವಾಸದಮನೆಗೆ ಕಟ್ಟಡಗಳನ್ನೊದಗಿಸುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಜಿ. ನಾರಾಯಣಗೌಡರು.—ನಾನು ಹೇಳುವುದು ಸ್ಕೂಲು ಕಟ್ಟಡ.

ಶ್ರೀ ಎ. ಜಿ. ರಾಮಚಂದ್ರರಾಯರು.—ಜಾಗ್ರತೆ ಆಗಬೇಕಾದರೆ, ಸರ್ಕಾರದಲ್ಲಿ ಹಣದ ಅಭಾವವಿರುವುದರಿಂದ ಜನಗಳೇ ಕೊಟ್ಟರೆ ಬೇಗ ಆಗುತ್ತದೆ.